# ಜೇನುಕಲ್ಲು ಗುಡ್ಡದ ಮೇಲೆ!



ಈ ಸಹ್ಯಾದ್ರಿಯ ಬೆಟ್ಟಸಾಲುಗಳಿಗೆ ಎಷ್ಟೊಂದು ಬಿಂಬಗಳು!

ಚಿತ್ರ–ಲೇಖನ:
**ಶಶಾಂಕ್ ವರ್ಮಾ ಜೆ.ಆರ್**

ಅತ್ಯಂತ ದಟ್ಟ ಅರಣ್ಯಗಳಲ್ಲಿ ಸಹ್ಯಾದ್ರಿ ಶ್ರೇಣಿಯೂ ಒಂದು. ಜೇನುಕಲ್ಲು ಗುಡ್ಡ ಮತ್ತು ಮಾಗೋಡು ಜಲಪಾತ ಇಲ್ಲಿವೆ. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಿಂದ ಜೇನುಕಲ್ಲು ಗುಡ್ಡಕ್ಕೆ 20 ಕಿ.ಮೀ. ದೂರ. ಇದು ಮಾಗೋಡು ಜಲಪಾತಕ್ಕೆ ಅತ್ಯಂತ ಹತ್ತಿರ. ಬೆಳ್ಳಂಬೆಳಿಗ್ಗೆ 6ಕ್ಕೆ ಗುಡ್ಡದತ್ತ ತೆರಳಲು ಆರಂಭಿಸಿದರೆ ಒಂಥರಾ ಮಜಾ. ಆದರೆ, ಬೈಕ್‌ನಲ್ಲಿ ಒಂದೆಡೆ  ಮೂರು ಕಿ.ಮೀ.ನಷ್ಟು ಮಣ್ಣಿನ ಕಚ್ಚಾ ರಸ್ತೆ ಇರುವುದರಿಂದ ಹರಸಾಹಸ ಮಾಡಬೇಕು. ಮಳೆಗಾಲದಲ್ಲಿ ಬೈಕ್ ಸ್ಕಿಡ್ ಆಗುವ ಸಂಭವ ಹೆಚ್ಚು.

ನಾನು ಮೊದಲ ಬಾರಿಗೆ ಜೇನುಕಲ್ಲು ಗುಡ್ಡಕ್ಕೆ ಬಂದಿದ್ದೆ. ಮೋಡ ಮುಸುಕಿದ ಆಗಸದಲ್ಲಿ ಸೂರ್ಯನ ನೆರಳು, ಬೆಳಕಿನಾಟವನ್ನು ನೋಡುವುದೇ ಒಂದು ಬಗೆಯ ಮೋಜು ಎನಿಸಿತ್ತು. ಮೋಡ, ಮಳೆಯ ನಡುವೆ ಒತ್ತೊತ್ತಾಗಿ ಒಟ್ಟಿದಂತೆ ಕಾಣುವ ಪರ್ವತ ಶ್ರೇಣಿಗಳ ಸೊಬಗನ್ನು ವರ್ಣಿಸಲು ಪದಗಳು ಸಾಲುವುದಿಲ್ಲ.

500 ಮೀಟರ್ ಎತ್ತರವಿರುವ ಬೆಟ್ಟದ ಮೇಲೆ ವೀಕ್ಷಣಾ ಗೋಪುರವಿದೆ. ಅಲ್ಲಿಂದ ಬೇಡ್ತಿ ನದಿಯು ಮಾಗೋಡು ಜಲಪಾತದಿಂದ ಇಳಿದು ಹಸಿರು ಬೆಟ್ಟಗಳ ನಡುವೆ ಹರಿಯುತ್ತಾ ಅರಬ್ಬಿ ಸಮುದ್ರವನ್ನು ಸೇರುವ ದೃಶ್ಯವನ್ನು ಕಣ್ತುಂಬಿಕೊಳ್ಳಬಹುದು. ಅದೊಂದು ಅದ್ಭುತ ದೃಶ್ಯ. ಸೂರ್ಯಾಸ್ತದ ಸಂದರ್ಭದಲ್ಲಿ ಈ ನೋಟ ಅಬ್ಬಾ..

ಜೇನುಕಲ್ಲು ಗುಡ್ಡದಿಂದ 5 ಕಿ.ಮೀ. ದೂರದಲ್ಲಿದೆ ಮಾಗೋಡು ಜಲಪಾತ. ನಾವು ಹೋಗುವ